**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

**ಸಿ.ಸಿ.ನಂ. 4404/2023**

ಸಿ.ಡಬ್ಲ್ಯೂ -02
ಪಿ.ಡಬ್ಲ್ಯೂ-02

ಸಾಕ್ಷಿದಾರನ ಹೆಸರು :- ಅನಿತಾ
ಗಂಡನ ಹೆಸರು :- ಹೆಚ್ ಎನ್ ಗೀರಿಶ್
ವಯಸ್ಸು :- 35 ವರ್ಷ
ಉದ್ಯೋಗ :- ವ್ಯವಸಾಯ
ವಾಸ :- ಹೊನ್ನೆಗೌಡನಪಾಳ್ಯ

**ಸಾಕ್ಷಿಗೆ ದಿಃ 10.06.2025 ರಂದು ಪ್ರಮಾಣ ವಚನ ಬೋದಿಸಲಾಯಿತು.**
**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಸುಮಾರು 3 ವರ್ಷಗಳ ಹಿಂದೆ ನಾನು ದನಗಳನ್ನು ಕಟ್ಟಿ ಮದ್ಯಾಹ್ನ 3 ಗಂಟೆಯ ಸಮಯದಲ್ಲಿ ಗಂಗಮ್ಮಾ ಅವರ ಜಮೀನಿನಲ್ಲಿದ್ದಾಗ ಆರೋಪಿತರು ದನ ಕುರಿಗಳನ್ನು ಮೇಯಿಲು ಬಿಟ್ಟಿದ್ದು ಏಕೆ ಬಿಟ್ಟಿದ್ದೀರಾ ಎಂದು ಕೇಳಿದಕ್ಕೆ ಆರೋಪಿ 2 ನನಗೆ ಬಡ್ಡಿ ಲೋಪರ್ ಮುಂಡೆ ಎಂದು ಅವ್ಯಾಚ್ಚ ಶಬ್ದಗಳಿಂದ ಬೈದಿರುತ್ತಾರೆ. ನಂತರ ನನ್ನ ಜುಟ್ಟನ್ನು ಹಿಡಿದು ಎಳೆದಾಡಿದ್ದು ನಂತರ ಆರೋಪಿ 1 ನನ್ನ ರವಿಕೆ ಮತ್ತು ಸೀರೆಯನ್ನು ಎಳೆದಾಡಿ ನನ್ನನ್ನು ಕೆಳಗೆ ಕೆಡವಿರುತ್ತಾರೆ. ನಂತರ ನನಗೆ ದೊಣ್ಣೆಯಿಂದ ತೊಡೆಗೆ, ಸೊಂಟಕ್ಕೆ ಹೊಡೆದಿರುತ್ತಾರೆ. ನಂತರ ಕಲ್ಲಿನಿಂದ ಸೊಂಟಕ್ಕೆ ಮತ್ತು ಎಡಕಾಲಿಗೆ ಹೊಡೆದಿರುತ್ತಾರೆ. ನಾನು ಕೂಗಿಕೊಂಡಾಗ ದೂರದಲ್ಲಿ ಕೆಲಸ ಮಾಡುತ್ತಿದ್ದ ಚಾಸಾ 3 ನನ್ನ ಮಗನಿಗೆ ಪೋನ್ ಮಾಡಿ ವಿಷಯ ತಿಳಿಸಿರುತ್ತಾರೆ. ನಂತರ ಆತ ನಾನು ಕ್ಲಾಸ್ ನಲ್ಲಿ ಇರುವ ಕಾರಣ ನೀವೆ ಹೋಗಿ ಬಿಡಿಸಿ ಎಂದು ಹೇಳಿದ್ದು ಅವರು ಬಂದು ಜಗಳ ಬಿಡಿಸಿರುತ್ತಾರೆ. ನಂತರ ನನ್ನ ಮಗ ಚಾಸಾ 1 ಅವರಿಗೆ ವಿಷಯ ತಿಳಿಸಿದ್ದು ಅವರು ಬಂದು ನನ್ನನ್ನು ಕುಣಿಗಲ್ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ನನ್ನ ಗಂಡ ನನ್ನನ್ನು ಮನೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ನನ್ನ ಗಂಡ ಪೋಲಿಸ ಠಾಣೆಗೆ ದೂರನ್ನು ನೀಡಿರುತ್ತಾರೆ. ನಂತರ ಪೋಲಿಸರು ಸ್ಥಳಕ್ಕೆ ಬಂದಿರುತ್ತಾರೆ. ಅಮಾನತ್ತು ಪಂಚನಾಮೆಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 3 ಎಂದು ಸಹಿ ನಿ.ಪಿ 3(ಎ) ಎಂದು ಗುರುತಿಸಲಾಯಿತು.

ಆ ದಿನ ಚಾಸಾ 7 ಮತ್ತು 8 ಸಹ ಹಾಜರಿದ್ದರು. ನಾನು ನ್ಯಾಯಾಧೀಶರ ಮುಂದೆಯೂ ಸಹ ಹೇಳಿಕೆ ನೀಡಿರುತ್ತೇನೆ ಅದನ್ನು ನಿ.ಪಿ 4 ಎಂದು ಸಹಿ ನಿ.ಪಿ 4(ಎ) ಎಂದು ಗುರುತಿಸಲಾಯಿತು. ಮು. ಮಾ. ಗಳನ್ನು ಗುರುತಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ದಿಃ 11.07.2022 ರಂದು ಗಲಾಟೆ ಆಗಿರುತ್ತದೆ ಎಂದರೆ ಸರಿ. ಗಲಾಟೆ ನಂತರ ಆರೋಪಿತರು ದೊಣ್ಣೆ ಮತ್ತು ಕಲ್ಲನ್ನು ಬಿಸಾಕಿ ಪ್ರಾಣ ಬೆದರಿಕೆ ಹಾಕಿ ಹೊರಟು ಹೋಗಿರುತ್ತಾರೆ ಎಂದರೆ ಸರಿ. ದಿಃ 29.07.2022 ರಂದು ನಾನು ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಅದೇ ದಿನ ನಾನು ನನ್ನ ರವಿಕೆ ಮತ್ತು ಸೀರೆಯನ್ನು ಪೋಲಿಸರ ಮುಂದೆ ಹಾಜರುಪಡಿಸಿದ್ದು ಪೋಲಿಸರು ಮದ್ಯಾಹ್ನ 2 ರಿಂದ 3 ಗಂಟೆಯವರೆಗೆ ಪಂಚನಾಮೆ ಮಾಡಿ ಅವುಗಳನ್ನು ಜಪ್ತು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸೀರೆ ಮತ್ತು ರವಿಕೆಯನ್ನು ಗುರುತಿಸುತ್ತೇನೆ ಅವುಗಳನ್ನು ಮು. ಮಾ. 3 ಮತ್ತು 4 ಎಂದು ಗುರುತಿಸಲಾಯಿತು.

**ಆರೋಪಿ ಪರ ಪಾಟೀ ಸವಾಲುಃ- ಬಿ. ಆರ್. ಆರ್. ವಕೀಲರಿಂದಃ**

ನನಗೆ ಓದಲು ಬರೆಯಲು ಬರುವುದಿಲ್ಲ. ಈ ದೂರನ್ನು ಚಾಸಾ 1 ಏಕೆ ನೀಡಿದ್ದಾರೆಂದು ಈ ದಿನವೇ ನಿಮಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಜಮೀನಿನಲ್ಲಿ ದನಗಳನ್ನು ಕಟ್ಟಿ ಹಾಕಿ ಅದರ ಪಕ್ಕದಲ್ಲಿರುವ ಜಮೀನಿನಲ್ಲಿದ್ದಾಗ ಗಲಾಟೆ ಆಗಿರುತ್ತದೆ. ನಾನು ದನ ಕಟ್ಟಲು ಹೋಗಿದ್ದಾಗ ಗಲಾಟೆ ಆಗಿರುತ್ತದೆಂದು ಹೇಳಿಕೆಯಲ್ಲಿ ಬರೆಯಲಾಗಿದೆ ಎಂದರೆ ಸರಿ. ಆರೋಪಿತರು ಕುರಿ ಮತ್ತು ಆಡುಗಳನ್ನು ಮೇಯಿಸುತ್ತಿದ್ದರು. ನಾವು ಮಾಡುತ್ತಿದ್ದ ಗಂಗಮ್ಮಾ ಅವರ ಜಮೀನಿನಲ್ಲಿ ಆರೋಪಿತರು ಆಡು ಮತ್ತು ಮೇಕೆಗಳನ್ನು ಮೇಯಿಸುತ್ತಿದ್ದರು. ನಾನು ನ್ಯಾಯಾಲಯದ ಮುಂದಿರುವ ಮು. ಮಾ. ಗಳನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ.

ಅಕ್ಕಪಕ್ಕ ದನ ಕರ ಮೇಯಿಸುತ್ತಿದ್ದ ಜನ ಯಾರು ಇರಲಿಲ್ಲ. ಪೋಲಿಸರು ನನ್ನ ಹೇಳಿಕೆಯಲ್ಲಿ ನನ್ನ ಮಗನಿಗೆ ರಾಜಮ್ಮಾ ಅವರು ಕರೆ ಮಾಡಿ ವಿಚಾರ ತಿಳಿಸಿದ್ದು ಅವರು ಬಂದು ವಿಚಾರ ತಿಳಿದು ನಂತರ ಚಾಸಾ 1 ಅವರಿಗೆ ವಿಚಾರ ತಿಳಿಸಿರುತ್ತಾರೆಂದು ನಾನು ಹೇಳಿಕೆ ನೀಡಿರುವುದಿಲ್ಲ ಹೇಳಿಕೆಯ ಸದರಿ ಭಾಗವನ್ನು ನಿ.ಡಿ 1 ಎಂದು ಗುರುತಿಸಲಾಯಿತು.

ಸೀರೆ ಮತ್ತು ರವಿಕೆಯನ್ನು ಜಮೀನಿಂದ ತಗೆದುಕೊಂಡು ಬಂದು ನೀಡಿರುತ್ತೇನೆ. ಸಹಿಯನ್ನು ಪೋಲಿಸ ಠಾಣೆಯಲ್ಲಿ ಹಾಕಿರುತ್ತೇನೆ. ದೊಣ್ಣೆ ಮತ್ತು ಕಲ್ಲನ್ನು ಪೋಲಿಸ ಠಾಣೆಗೆ ತಂದು ನೀಡಿರುತ್ತೇನೆ.

ಆಯಿತು ಎನ್ನುವ ಗಲಾಟೆಯಲ್ಲಿ ನನಗೆ ರಕ್ತ ಗಾಯ ಆಗಿರಲಿಲ್ಲ ಮೂಗೆಟು ಆಗಿರುತ್ತವೆ. ಆಯಿತು ಎನ್ನುವ ಗಲಾಟೆಯಲ್ಲಿ 7 ರಿಂದ 8 ಗಾಯಗಳು ಆಗಿದ್ದವು. ಸದರಿ ಗಾಯಗಳ ಬಗ್ಗೆ ವೈದ್ಯರಿಗೆ ಹೇಳಿರುತ್ತೇನೆ. ವೈದ್ಯರಿಗೆ ಯಾರು ಯಾವುದರಿಂದ ಎಲ್ಲಿ ಹೊಡೆದಿರುತ್ತಾರೆಂದು ಹೇಳಿರುತ್ತೇನೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ 15 ದಿನಗಳ ಕಾಲ ಚಿಕಿತ್ಸೆ ಪಡೆದಿರುತ್ತೇನೆ. ಅವುಗಳ ದಾಖಲೆಯನ್ನು ಪೋಲಿಸರಿಗೆ ನೀಡಿರುತ್ತೇನೆ. ಪೋಲಿಸರು ಸ್ಥಳಕ್ಕೆ ಬಂದು ಮೇಕೆ ಕುರಿ ಮೇಯಿದಿರುವುದನ್ನು ನೋಡಿರುವುದಿಲ್ಲ. ಆಯಿತು ಎನ್ನುವ ಗಲಾಟೆಯಲ್ಲಿ ನನಗೆ ಪ್ರಜ್ಞೆ ಹೋಗಿದ್ದು ಅರ್ದ ದಿಂದ 1 ಗಂಟೆಯ ನಂತರ ನನಗೆ ಪ್ರಜ್ಞೆ ಬಂದಿರುತ್ತದೆ. ನನ್ನ ಗಂಡ ನನ್ನನ್ನು ಆಟೋದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

ಗಲಾಟೆ ಆದ ದಿನವೇ ಪೋಲಿಸಠಾಣೆಗೆ ಹೋಗಿ ದೂರು ನೀಡಿರುತ್ತೇವೆ. ನಾನು ಹೇಳಿದಂತೆ ಯಾವುದೇ ಗಲಾಟೆ ಆಗಿಲ್ಲ ಆರೋಪಿತರು ಹಲ್ಲೆ ಮಾಡಿಲ್ಲ ಅವ್ಯಾಚ್ಚ ಶಬ್ದಗಳಿಂದ ಬೈದಿಲ್ಲ, ಸೀರೆ ಮತ್ತು ರವಿಕೆ ಎಳೆದಾಡಿಲ್ಲ ಎಂದರೆ ಸರಿಯಲ್ಲ. ನನ್ನ ರವಿಕೆ ಎಡಗಡೆ ತೋಳು ಹರಿದು ಹೋಗಿರುತ್ತದೆ. ಈ ಬಗ್ಗೆ ಪೋಲಿಸರಿಗೆ ಹೇಳಿರುತ್ತೇನೆ. ನಾನು ಕುಣಿಗಲ್ ಮತ್ತು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲವೆಂದರೆ ಸರಿಯಲ್ಲ. ಆರೋಪಿತರು ಯಾವುದೇ ದೊಣ್ಣೆ ಮತ್ತು ಕಲ್ಲಿನಿಂದ ಹೊಡೆದಿಲ್ಲ ಅವುಗಳನ್ನು ನಾನೇ ತಗೆದುಕೊಂಡು ಹೋಗಿ ಪೋಲಿಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಧೀಶರ ಮುಂದೆ ಪೋಲಿಸರ ಹೇಳಿಕೆ ಮೇರೆಗೆ ಯಾವುದೇ ಘಟನೆ ನಡೆಯದಿದ್ದರೂ ಅವರು ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಆರೋಪಿತರ ಮೇಲಿನ ದ್ವೇಷದಿಂದ ಚಾಸಾ 1 ಅವರು ಸುಳ್ಳು ದೂರನ್ನು ನೀಡಿದ್ದು ನಾನು ಅದನ್ನು ಅನುಮೋದಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

**ಸಹಿ/-**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**

**ಕುಣಿಗಲ್.**